

ಪೆರಿನಾಝುಳಿಗೆ ಪಾಪ, ಅದನ್ನು ಸಹಿಸಿಕೊಳ್ಳುವುದು ಕಷ್ಟವಾಗಿದ್ದಿರಬೇಕು, ಸೂಕ್ಷ್ಮ ಜೀವಿಯಾದ ಆಕೆ ಇದ್ದಕ್ಕಿದ್ದಂತೆ ಕಾಲೇಜಿಗೆ ಬರುವುದನ್ನೇ ಬಿಟ್ಟು ಬಿಟ್ಟಿದ್ದಳು, ಎಂದು ಐರಿನ್ ವಿವರಣೆ ಕೊಡುವಾಗ - ಆಗ ತಾನೇ ಅರಳಲಿಕ್ಕಿರುವ ಹೂವೊಂದು ಅರಳುವ ಮೊದಲೇ ಬಾಡಿತೇ ಎಂದೆನಿಸಿತು. ಮೇಧಾವಿಯಾಗಿದ್ದ ಅವಳು ಕಾಲೇಜು ಬಿಟ್ಟದ್ದು ಸಹಪಾಠಿಗಳಿಗೆ ಮಾತ್ರವಲ್ಲ ಉಪನ್ಯಾಸಕರಿಗೂ ಸಹಜವಾಗಿ ತುಂಬ ಖೇದವೆನಿಸಿತ್ತಂತೆ.

ಅಂತೂ, ಒಂದಕ್ಕೊಂದು ಹೊಂದಾಣಿಕೆಯಾಗದ ಪೆರಿನಾಝುಳ ವಿವಿಧ ಮುಖಗಳು ನನ್ನೊಳಗೆ ಉಂಟುಮಾಡಿದ ಗೊಂದಲದೊಂದಿಗೆ ಮರುದಿನ ಅವಳ ಮನೆಗೆ ಹೊರಟೆ.

ಪೆರಿನಾಝ್ ವಾಡಿಯಾಳ ಮನೆ ಇದ್ದುದು ಅತಿ ಶ್ರೀಮಂತರು ಇರುವ ಜಾಗಗಳಲ್ಲಿ ಒಂದಾದ ದಕ್ಷಿಣ ಮುಂಬಯಿಯ ಪೆಡ್ಡಾ ರೋಡಿನಲ್ಲಿ. ಅದೊಂದು ಆರಂತಸ್ತಿನ ಬಂಗಲೆ. ನಿಗದಿತವಾದಂತೆ ಸಂಜೆ ಐದು ಗಂಟೆಗೆ ಸರಿಯಾಗಿ ನೋಟ್ಸ್ ಬರೆಯಲಿಕ್ಕೆಂದು ಜೊತೆಯಲ್ಲಿ ಕರೆತಂದಿದ್ದ ಸಹಾಯಕಿ ಪ್ರಣೀತಳೊಂದಿಗೆ ಅಲ್ಲಿಗೆ ತಲಪಿದೆ. ಗೇಟಿನ ಒಳಗೆ ಕಾಲಿಡಲಿಕ್ಕಿಲ್ಲ, ಪ್ರಣೀತ, 'ಈಯಾ...' ಎಂದು ಕಿರಿಚಿದ್ದು ನೋಡಿ, ಅವಳನ್ನು ಗದರಬೇಕಾಯಿತು. ಸಹಾಯಕಿಯನ್ನು ಕರೆತರಲು ನಾನು ಪೆರಿನಾಝುಳ ಕಾರ್ಯದರ್ಶಿಯಿಂದ ವಿಶೇಷ ಪರವಾನಿಗೆಯನ್ನೂ ಪಡೆದಿದ್ದೆ. ತೋಟದ ಅಂದ-ಅಚ್ಚುಕಟ್ಟು ಮಾತ್ರ ಯಾರಾದರೂ ಖುಶಿಯಲ್ಲಿ ಕಿರಿಚುವ ಹಾಗೇ ಇತ್ತು. ಕೆಳಗಿನ ಅಂತಸ್ತಿನಲ್ಲಿ ಎದುರುಗೊಂಡ ಮನೆವಾರ್ತೆಯ ಹೆಂಗಸು ಮೊದಲ ಮಹಡಿಗೆ ಕರೆದುಕೊಂಡು ಹೋಗಿ ಕುಳ್ಳಿರಿಸಿದಳು. ಅತ್ಯಂತ ಕೆಳಗಿನ ಅಂತಸ್ತಿನಲ್ಲಿ ಕೆಲಸದವರಿದ್ದರೆ,